

ಹಿನ್ನೆಲೆಯನ್ನು ಹೇಳುವೆ. ನಮ್ಮೂರ ಬದಿಯಲ್ಲಿ ಹರಿಯುವ ನೇತ್ರಾವತಿ ನದಿಯಲ್ಲಿ ದೋಣಿ ನಡೆಸುತ್ತಿದ್ದವರಲ್ಲಿ 'ಪೊಡಿಮೋನು' ಎಂಬವರು ಪ್ರಮುಖರು. ಅಪ್ರತಿಮ ಧೈರ್ಯಶಾಲಿ. ನಡು ಮಳೆಗಾಲದಲ್ಲಿ ಧುಮ್ಮಿಕ್ಕುವ ರಭಸದ ನದಿಯನ್ನು ಅವರು ಈಜಿಕೊಂಡೇ ಸಾಗುತ್ತಿದ್ದರು. ಅವರ ಈ ಈಜಿನ ಕೌಶಲವನ್ನು, ಅವರು ಕಾಲವಾಗಿ ವರ್ಷವಾದರೂ ಜನ ಕಣ್ಣಿಗೆ ಕಟ್ಟಿದಂತೆ ಈಗಲೂ ಹೇಳುವುದಿದೆ. ಅವರು ನೆರೆಯ ವೇಗ ಬಳಸಿ ಅಡ್ಡವಾಗಿ ಈಜಿಕೊಂಡು ಸುಸೂತ್ರವಾಗಿ ದಡ ಸೇರುತ್ತಿದ್ದರಂತೆ. ಒಳ್ಳೆಯ ದೋಣಿ ನಡೆಸುವವರಾದ್ದರಿಂದ ಮೀನಿನಂತೆ ಈಜುವ ಕೌಶಲ ಅವರಿಗೆ ಕರತಲಾಮಲಕವಾಗಿರಬೇಕು. ಮೀನು ಬೇಟೆಯಲ್ಲಿ ಅವರದ್ದು ಎತ್ತಿದ ಕೈ. ಹುಣ್ಣಿಮೆಯ ದಿನ ಟಾರ್ಚು ಹಾಕಿ ಮೀನು ಹಿಡಿಯಲು ಹೋಗುತ್ತಿದ್ದುದು ಅವರ ರೂಢಿ. ಅವರು ನೀರಿಗಿಳಿದರೆ ಮನೆಯಲ್ಲಿ ಮಸಾಲೆ ರುಬ್ಬಿ ಇಟ್ಟೇ ಮಹಿಳೆಯರು ಕಾಯುತ್ತಿದ್ದರಂತೆ. ಇಷ್ಟೆಲ್ಲಾ ವೃತ್ತಾಂತ ಹೇಳಲು ಕಾರಣ ಅವರ ನಿಯತ್ತು ಮತ್ತು ನಿಸ್ವಾರ್ಥ ಬದುಕು. ಅವರ ಬದುಕಿನ ಘಟನೆಯೊಂದನ್ನು 'ಲಿಂಗ'ನಿಗೆ ತಾಳೆ ಹಾಕುವುದಕ್ಕಾಗಿ. ನನ್ನ ಅಬ್ಬ ಆ ದಿನಗಳಲ್ಲಿ ಮರ ಕಡಿಯಲು ಪರವಾನಗಿ ಪಡೆದು ನದಿ ಮೂಲಕವೇ ದಿಣ್ಣೆಗಳನ್ನು ಸಾಗಿಸುವ ದೊಡ್ಡ ಮತ್ತು ಅಪಾಯದ ವ್ಯಾಪಾರಕ್ಕೆ ಕೈ ಹಾಕಿದ್ದರು. ಈ ಮರಗಳನ್ನು ಸಾಗಿಸಲು ಪರವಾನಗಿ ಪಡೆಯುವವ ಎಷ್ಟು ಜಾಗರೂಕತೆ ಮಾಡಿದರೂ ಅಷ್ಟೇ. ಒಬ್ಬನೇ ಒಬ್ಬ ಗಾರ್ಡ್‌ಗೂ ವಿಚಾರ ತಿಳಿಯದಂತೆ ಕೆಲಸ ನಡೆಸುವ ಹಾಗಿಲ್ಲ. ಯಾವ ದೊಡ್ಡ ಆಫೀಸರನ್ನೂ